ಹೊತ್ತಲ್ಲಿ ಮಾಲೀಕರ ಮನೆಗೆ ಕರೆದೊಯ್ದೆ. ಮನೆಯ ನಿಜವಾದ ಒಡೆತನವು ಮಾಲೀಕರ ಧರ್ಮಪತ್ನಿಯಲ್ಲಿದೆ ಎಂಬ ಸತ್ಯವು, ಆಕೆಯ ಗುಟುರುಗಳಿಂದಲೂ ಮಾತಾಡುವಾಗ ಹೊಡೆಯುವಂತೆ ತಿವಿಯುವಂತೆ ತಿರುವುತ್ತಿದ್ದ ಹೊನ್ನಬಳೆಗಳಿಂದ ಅಲಂಕೃತವಾದ ಕೈಗಳಿಂದಲೂ ಮನದಟ್ಟಾಯಿತು. ಸ್ಕೂಲು ತಪ್ಪಿಸುವ ಬಾಲಕನನ್ನು ಹೆಡ್‌ಮಾಸ್ತರರ ಮುಂದೆ ತಂದು ವಿಚಾರಣೆಗೆ ನಿಲ್ಲಿಸುವಂತೆ, ಮಾಜಿಯು ನನ್ನನ್ನು ದರದರ ಎಳೆದು ಎದುರು ನಿಲ್ಲಿಸಿ, 'ಏನಮ್ಮಾ, ಇವರು ನಮ್ಮ ಹುಡುಗನಿಗೆ ಲಚ್ಚರ್ರು. ಅಡ್ವಾನ್ಸು ಇಸ್ಕೊಂಡು ಇನ್ನೂ ಬೀಗದಕೈ ಕೊಟ್ಟಿಲ್ಲವಂತೆ. ಏನ್ಸಮಾಚಾರ?' ಎಂದು ಸವಾಲು ಹಾಕಿದನು. ಅವನಿಗೆ ಪರಸ್ತ್ರೀಯರ ಗುಂಡಿಗೆ ನಡುಗಿಸುವಂತೆ ರೋಪು ಹಾಕಬಲ್ಲ ತೀಕ್ಷ್ಣ ಗಂಟಲಿತ್ತು; ಕುಡಿದು ಕೆನ್ನೆಯೆಲುಬು ಬಿಟ್ಟುಕೊಂಡ ಮುಖದಲ್ಲಿ ಕಣ್ಣುಗುಡ್ಡೆಗಳನ್ನು ಗರಗರ ತಿರುಗಿಸುತ್ತ ಎದುರಾಳಿ ಎದೆಯಲ್ಲಿ ಛಳಕು ಹುಟ್ಟಿಸಬಲ್ಲ ರೌದ್ರಕಲೆಯಿತ್ತು. ಸಿಟ್ಟಿನಲ್ಲಿ ಮೀಸೆಗಳನ್ನು ಬಿರುಗಾಳಿಯಲ್ಲಿ ಹೊಯ್ದಾಡುವ ಬಳ್ಳಿಗಳಂತೆ ಕುಣಿಸಬಲ್ಲವನಾಗಿದ್ದನು. ಯಾಕಾದರೂ ಇವನನ್ನು ಕರೆದುತಂದೆನೊ? ಕೋಮುಗಲಭೆಗೆ ಹೆಸರಾದ ಊರಿದು. ಪ್ರಕರಣ ವಿಪರೀತಕ್ಕೆ ಹೋಗಿ ನಾನು ಜೈಲುಪಾಲಾದರೆ ನನ್ನನ್ನು ವರಿಸಲು ತುದಿಗಾಲಲ್ಲಿ ನಿಂತಿರುವ ಆ ಕನ್ಯೆಯ ಗತಿಯೇನು ಎಂದು ಚಿಂತಾಕ್ರಾಂತನಾದೆ. ಇಂತಹ ಎಷ್ಟೊ ಮಧ್ಯವರ್ತಿ ಪುಂಡರನ್ನು ಕಂಡಿದ್ದ ಮನೆಯೊಡತಿ, ಅವನ ಬಣ್ಣದವೇಷದ ಕುಣಿತಕ್ಕೆ ಚೂರೂ ಸೊಪ್ಪು ಹಾಕಲಿಲ್ಲ. ಪತಿದೇವರು ನಿಂತು ನಿರ್ಲಿಪ್ತ ನೋಡುತ್ತಿರಲು, ಅಸೀಮ ನಿರ್ಲಕ್ಷದ ದನಿಯಲ್ಲಿ, 'ಯಾರಪ್ಪ ನೀನು ಹೆಂಗಸರ ಮುಂದೆ ರೋಪು ಹಾಕೋನು? ಮನೆ ನಮಗೇ ಬೇಕಾಗಿದೆ. ಯಾರಿಗೂ ಕೊಡಲ್ಲ. ಸುಮ್ಮನೆ ಅಡ್ವಾನ್ಸು ತಗಂಡು ವಾಪಾಸು ಹೋಗು. ಜಾಸ್ತಿ ಮಾತಾಡಿದರೆ ಅದೂ ಸಿಗಲ್ಲ' ಎಂದು ಒಣಕಡ್ಡಿಯನ್ನು ಮುರಿದಂತೆ ನುಡಿದರು. ಆಗ ಮಾಜಿಯು ಎರಡನೇ ಸುತ್ತಿನ ತಂತ್ರ ಪ್ರಯೋಗಿಸಿದನು. ಅರ್ಥಾತ್, ಪ್ಯಾಂಟ್‌ಜೇಬಲ್ಲಿ ಅಡಗಿಸಿದ್ದ ಕ್ವಾರ್ಟರ್ ಬಾಟಲಿಯನ್ನು ಸರಕ್ಕನೆ ತೆಗೆದು, ಸರ್ಕಾರಿ ಆಸ್ಪತ್ರೆಯ ಔಷಧಿಯನ್ನು ಸೇವಿಸುವಂತೆ ಗಟಗಟ ಕುಡಿದು, ಮುಖ ಹುಳ್ಳಗೆ ಮಾಡಿ ಬಾಯಿ ಒರೆಸಿಕೊಂಡು, ಬಾಟಲಿಯನ್ನು ಮನೆಯ ಮುಂದಿದ್ದ ರಸ್ತೆಯ ಮೇಲೆಸೆದನು. ಅದು ಫಳಾರ್ ಎಂದು ಸಶಬ್ದವಾಗಿ ನುಚ್ಚುನೂರಾಯಿತು. ಕೂಡಲೇ ಒಡತಿಯ ವೀಕ್ಷಕ ವಿವರಣೆ ಕರೆಂಟುಹೋದ ಮೈಕಿನಂತೆ ನಿಂತುಹೋಯಿತು. ಗೋಡೆಯಲ್ಲಿ ದೇವರಪಟದ ಕೆಳಗಿನ ಮೊಳೆಯಲ್ಲಿ ನೇಲುತ್ತಿದ್ದ ಬೀಗದೆಸಳು, ಅಗಲಿದ ಕರು ತಾಯಮಡಿಲನ್ನು ಸೇರುವಂತೆ ನನ್ನ ಅಂಗೈತಲಕ್ಕೆ ಬಂದು ಸೇರಿತು. ಒಂದು ಚಿಕ್ಕ ಬಾಟಲಿಗೆ ಇಷ್ಟೊಂದು ಶಕ್ತಿಯಿರುವುದನ್ನು ನಾನು ಊಹಿಸಿರಲಿಲ್ಲ. 'ಮುಂದೆ ಏನಾದರೂ ತಂಟೆ ತಕರಾರು ಬಂದಲ್ಲಿ ನನಗೆ ಬಂದು ತಿಳಿಸಬೇಕು' ಎಂದು ತಾಕೀತು ಮಾಡಿದ ಮಾಜಿ, ಬೀದಿಗಿಳಿದು ಹೊರಟು ಹೋದನು. ಬರುವಾಗ ಬೀಳುವಂತೆ ಹೊಯ್ದಾಡಿಕೊಂಡು ಬಂದವನು, ಕಚ್ಚಾತೈಲ ಬಿದ್ದ ಬಳಿಕ ಶಿಸ್ತಿನ ಸಿಪಾಯಿಯಂತೆ ನೆಟ್ಟಗೆ ಕೈಬೀಸಿಕೊಂಡು ಚಲಿಸುವುದು ಅಚ್ಚರಿ ಹುಟ್ಟಿಸಿತು.

ದುರ್ಲಭವಾಗಿದ್ದ ಬೀಗದ ಕೈಯನ್ನು ಪಡೆದವನಾಗಿ ಲಗುಬಗೆಯಲ್ಲಿ ಗೃಹಪ್ರವೇಶ ಮಾಡಿದೆ. ರೌಡಿಗಳನ್ನು ಬಿಟ್ಟು ಮನೆ ಕಬ್ಜಾ ಪಡೆದುಕೊಂಡ ಕೀರ್ತಿ ಕಾಲೇಜಿನಲ್ಲಿ ಶರವೇಗದಲ್ಲಿ ಹಬ್ಬಿತು. ಪರಿಣಾಮ – ಆರ್ಟ್ಸ್ ಕ್ಲಾಸಿನಲ್ಲಿ ಐದಾರು ವರ್ಷದಿಂದಲೂ ಫೇಲಾಗುತ್ತ ತರಲೆ ಮಾಡುತ್ತಿದ್ದ ತುಂಟ ವಿದ್ಯಾರ್ಥಿಗಳು ವಿಧೇಯ ಶಿಷ್ಯರಾಗಿ ಬದಲಾದರು. ಒಂದೇ ತಿಂಗಳಲ್ಲಿ ಲಗ್ನವಾಗಿ ಮನಮೆಚ್ಚಿದ ಮಡದಿಯ ಜತೆ ಹೊಸಮನೆಯಲ್ಲಿ ಸುಖಸಂಸಾರ